





**ಕಾಡ ನಡುವೆ ಮನುಷ್ಯನ ಸ್ವಾರ್ಥದ ಗುರುತು ಮೂಡಿದರೆ ಧರೆ ಬಿರಿಯದಿದ್ದೀತೆ..?**
ಗುಡ್ಡವನ್ನು ಕಡಿದು ಡಾಂಬರು ಮೆತ್ತಿ ಮಾಡಿದ ರಸ್ತೆಗಳೂ ಪಶ್ಚಿಮ ಘಟ್ಟದ ನಡು ಮುರಿಯುತ್ತಿವೆ.
(ಮೇಲಿನ ಚಿತ್ರ: ಗೋಪಾಲಕೃಷ್ಣ ಉಪಾಧ್ಯಾಯ)

ವೈಜ್ಞಾನಿಕವಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸುವ ವಿಜ್ಞಾನದ ವಿವೇಚನೆ ಜನರ ಬದುಕನ್ನು ಬರಿದು ಮಾಡುವ ಪ್ರಯತ್ನಕ್ಕೆ ಕೈ ಹಾಕುವುದಿಲ್ಲ. 'ಜೀವ ಇದ್ದರೆ ಜೀವನ' ಎಂಬ ಸಿದ್ಧಾಂತದಿಂದ ಪಶ್ಚಿಮಘಟ್ಟಗಳ ಸಂಪೂರ್ಣ ಅಧ್ಯಯನ ಮಾಡಿ, ಜನರ ಹಿತ ದೃಷ್ಟಿಯಿಂದ ವರದಿ ಸಲ್ಲಿಕೆಯಾಗಿವೆ. ಗುಡ್ಡಗಳು ನಡುಗಿ ಕುಸಿಯುವ ಮೊದಲು ಜೀವರಕ್ಷಣೆಯ ದಾರಿಗಳು ಇವಾಗಿವೆ.

ಕರ್ನಾಟಕ ಸರ್ಕಾರ ಕಸ್ತೂರಿ ರಂಗನ್ ವರದಿಯನ್ನು ಸಂಪೂರ್ಣವಾಗಿ ತಳ್ಳಿಹಾಕಿದೆ. ರಾಷ್ಟ್ರದ ಹಸಿರು ನ್ಯಾಯ ಮಂಡಳಿ ರಾಜ್ಯದ ಘಟ್ಟದ ಜನಜೀವನದ ಕಾಳಜಿಯನ್ನು ಕಾಪಾಡುವ ದಿಶೆಯಲ್ಲಿ ಪಶ್ಚಿಮಘಟ್ಟದ ಬಹಳಷ್ಟು ವಲಯಗಳನ್ನು ಸೂಕ್ಷ್ಮ ವಲಯ ಎಂದು ಯಾವ ಕಾರಣಕ್ಕೂ ತೀರ್ಮಾನಿಸಬಾರದು. ಹಾಗೆ ನಿರ್ಣಯಿಸಿದರೆ, ಜನರ ಬದುಕು, ಬಾಳ್ವೆಯ ತಲೆಯ ಮೇಲೆ ಕಲ್ಲುಚಪ್ಪಡಿ ಹೊರಸಿದಂತೆಯೇ. ಸಾವಿರಾರು ವರ್ಷಗಳಿಂದ ನೆಲ, ನೀರು, ಪರಿಸರವನ್ನು ಹೊಂದಿಕೊಂಡು ಬದುಕುತ್ತಿರುವ ಸಮುದಾಯಗಳು ಅನಾಥವಾಗುತ್ತವೆ., ಹಾಗಾಗಿ ಎಲ್ಲೆಲ್ಲಿ ಅರಣ್ಯ ವಲಯಗಳಿವೆಯೋ, ಸರ್ಕಾರ ಸಂರಕ್ಷಿತ ಪ್ರದೇಶಗಳೆಂದು ಎಲ್ಲೆಲ್ಲಿ ಘೋಷಿಸಿದೆಯೋ ಅದರ ಅತೀ ಸಮೀಪದ ಪರಿಸರವನ್ನು ಮಾತ್ರ ಸೂಕ್ಷ್ಮ ಪ್ರದೇಶಗಳೆಂದು ಪರಿಗಣಿಸಬಹುದು. ಹಾಗೆಯೇ ಅಭಿವೃದ್ಧಿ ಚಟುವಟಿಕೆಗಳು ನಿಯಂತ್ರಣಕ್ಕೆ ಒಳಪಡಬೇಕು. ಕಸ್ತೂರಿ ರಂಗನ್ ವರದಿಯನ್ನು ಒಪ್ಪಿಕೊಂಡರೆ, ಮೈಸೂರು, ಚಾಮರಾಜನಗರ, ಹಾಸನ, ಶಿವಮೊಗ್ಗ ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳ 20,668 ಚ.ಕಿ.ಮೀ. ವ್ಯಾಪ್ತಿಯ ಘಟ್ಟ ಪ್ರದೇಶದ 1576 ಗ್ರಾಮಗಳಿಗೆ ತೊಂದರೆಯಾಗುತ್ತದೆ ಎನ್ನುವುದು ರಾಜ್ಯ ಸರ್ಕಾರದ ವಾದ.

ಈ ತರ್ಕದಲ್ಲಿ ಹುರುಳಿಲ್ಲದೆ ಇಲ್ಲ. ಆದರೆ, ಘಟ್ಟ ಪ್ರದೇಶಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸ್ವಲ್ಪ ಪ್ರಮಾಣದ ರಾಜಿ ಮನೋಭಾವವನ್ನು ಎಲ್ಲರೂ ತೋರಲೇಬೇಕಾಗಿದೆ. ಘಟ್ಟ ಪ್ರದೇಶಗಳು ಉಳಿವಿನಲ್ಲಿ ನಮ್ಮ ಉಳಿವೂ ಸೇರಿದೆ ಎನ್ನುವ ವಿವೇಕ ಎಲ್ಲರದಾಗಬೇಕಾಗಿದೆ. ಕಾಡಿನೊಂದಿಗೆ ಬದುಕು ಬೆಸೆದುಕೊಂಡ ಮೂಲ ನಿವಾಸಿಗಳ ಹಿತಾಸಕ್ತಿ ರಕ್ಷಣೆಯೊಂದಿಗೆ, ಅಭಿವೃದ್ಧಿ ಚಟುವಟಿಕೆಗಳನ್ನು ನೈತಿಕ ಮತ್ತು ಕಠಿಣ ಕಾನೂನು ನಿಯಂತ್ರಣಕ್ಕೆ ಒಳಪಡಿಸುವುದು ಅಗತ್ಯ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಶೀಘ್ರ ಕಾರ್ಯನ್ಮುಖಗೊಳ್ಳಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in